# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1378 |
| ಸದಸ್ಯರ ಹೆಸರು | ಶ್ರೀ ವಿಜಯ ಸಿಂಗ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 18-03-2020 |
| ಉತ್ತರಿಸುವ ಸಚಿವರು | ಉಪಮುಖ್ಯಮಂತ್ರಿ<br>ಲೋಕೋಪಯೋಗಿ ಮತ್ತು<br>ಸಮಾಜ ಕಲ್ಯಾಣ ಇಲಾಖೆ |

| ಕ್ರಮ ಸಂಖ್ಯೆ | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಬೀದರ್ ಹುಮ್ನಾಬಾದ್ ಹೆದ್ದಾರಿ ರಸ್ತೆ ಹಾಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಸರ್ಕಾರ ಕೈಗೊಂಡ ಕ್ರಮಗಳೇನು; | ಬಂದಿದೆ.<br>ರಾಷ್ಟ್ರೀಯ ಹೆದ್ದಾರಿ-50 ಕಿಮೀ.0.00 ರಿಂದ ಕಿ.ಮೀ.101.40 ರವರೆಗೆ ಮಹಾರಾಷ್ಟ್ರ ಗಡಿಯಿಂದ-ಬೀದರ್ ಹುಮ್ನಾಬಾದ್‌ವರೆಗೆ ಹಾದು ಹೋಗುತ್ತಿದ್ದು (ಕಿ.ಮೀ.54.37 ರಿಂದ ಕಿಮೀ.101.40 ರವರೆಗೆ) ಒಟ್ಟು 47.03 ಕಿ.ಮೀ. ಉದ್ದವಿರುತ್ತದೆ. ಸದರಿ ರಸ್ತೆಯ ಮರು ನಿರ್ಮಾಣ ಅಗತ್ಯವಿದ್ದು, ಸದ್ಯಕ್ಕೆ ತಾತ್ಕಾಲಿಕ ನಿರ್ವಹಣೆ ಕೈಗೊಂಡು ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲಾಗಿದೆ. ಒಟ್ಟು 47.03ಕಿ.ಮೀ ಉದ್ದದ ಈ ರಾಷ್ಟ್ರೀಯ ಹೆದ್ದಾರಿ ಮರು ನಿರ್ಮಾಣಕ್ಕೆ ರೂ.364.60 ಕೋಟಿಗಳ ಅಂದಾಜು ಪಟ್ಟಿಯನ್ನು ತಯಾರಿಸಿ ಕೇಂದ್ರ ಸರ್ಕಾರಕ್ಕೆ ಅನುಮೋದನೆಗೆ ದಿನಾಂಕ:16-12-2019ರಂದು ಸಲ್ಲಿಸಲಾಗಿರುತ್ತದೆ. |
| ಆ) | ರಸ್ತೆಯ ಅಭಿವೃದ್ಧಿಗೆ ಸರ್ಕಾರದಿಂದ ಅನುದಾನ ನೀಡಲಾಗಿದೆಯೇ; ನೀಡಲಾಗಿದ್ದರೆ ಎಷ್ಟು ಅನುದಾನ ನೀಡಲಾಗಿದೆ; ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು? | ರಾಷ್ಟ್ರೀಯ ಹೆದ್ದಾರಿ-50ರ ಮರು ನಿರ್ಮಾಣಕ್ಕೆ ಕೇಂದ್ರ ಸರ್ಕಾರದಿಂದ ರೂ.344.78 ಕೋಟಿಗಳ ಅನುದಾನವನ್ನು 2019-20ರ ವಾರ್ಷಿಕ ಯೋಜನೆ (ಮೂಲ ಕಾಮಗಾರಿ) ಅಡಿಯಲ್ಲಿ ನೀಡಲಾಗಿದೆ. ಕೇಂದ್ರ ಸರ್ಕಾರದಿಂದ ಈ ಯೋಜನೆಗೆ ಆಡಳಿತಾತ್ಮಕ, ಆರ್ಥಿಕ ಮತ್ತು ತಾಂತ್ರಿಕ ಅನುಮೋದನೆ ಅಂತಿಮ ಹಂತದಲ್ಲಿರುತ್ತದೆ. ಅನುಮೋದನೆ ದೊರೆತ ನಂತರ ಚಾಲ್ತಿಯಲ್ಲಿರುವ ನಿಯಮಾನುಸಾರ ಕಾಮಗಾರಿಯನ್ನು ಕೈಗೊಳ್ಳಲಾಗುವುದು. |

ಕಡತ ಸಂಖ್ಯೆ: ಲೋಇ 77 ಸಿಎನ್‌ಹೆಚ್ 2020 (ಇ)

(ಗೋವಿಂದ.ಎಂ.ಕಾರಜೋಳ)
ಉಪಮುಖ್ಯಮಂತ್ರಿ
ಲೋಕೋಪಯೋಗಿ ಮತ್ತು
ಸಮಾಜ ಕಲ್ಯಾಣ ಇಲಾಖೆ.